ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 26-10-1991.

# *ತಪಸ್ಸಿನ ಪ್ರತ್ಯಕ್ಷ ಫಲ – ಖುಷಿ*

(तपस्या का प्रत्यक्ष-फल - ख़ुशी)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.
- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.
- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.
- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಅವ್ಯಕ್ತ ಬಾಪ್‌ದಾದಾ ತನ್ನ ತಪಸ್ವಿರಾಜ್ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ಬಾಪ್‌ದಾದಾ ತಮ್ಮ ಸರ್ವ ತಪಸ್ವಿರಾಜ ಮಕ್ಕಳನ್ನು ನೋಡುತ್ತಿರುವರು. ತಪಸ್ವಿಯೂ ಆಗಿರುವಿರಿ ಮತ್ತು ರಾಜ್ಯ ಅಧಿಕಾರಿಯೂ ಆಗಿರುವಿರಿ ಆದ್ದರಿಂದ ತಪಸ್ವಿರಾಜ ಆಗಿರುವಿರಿ. ತಪಸ್ವಿ ಅರ್ಥಾತ್ ರಾಜ್ಯ ಅಧಿಕಾರಿ ಆಗುವುದು. ತಪಸ್ಸು ರಾಜರನ್ನಾಗಿ ಮಾಡುತ್ತದೆ. ಎಲ್ಲರೂ ರಾಜರಾಗಿರುವಿರಿ ಅಲ್ಲವೇ? ತಪಸ್ಸಿನ ಬಲ ಯಾವ ಫಲ ಕೊಡುತ್ತದೆ? ಅಧೀನರಿಂದ ಅಧಿಕಾರಿ ಅರ್ಥಾತ್ ರಾಜನನ್ನಾಗಿ ಮಾಡುತ್ತದೆ. ಆದ್ದರಿಂದ ತಪಸ್ಸಿನಿಂದ ರಾಜ್ಯ ಭಾಗ್ಯ ಪ್ರಾಪ್ತಿಯಾಗುತ್ತದೆ ಎನ್ನುವ ಗಾಯನವಿದೆ. ಅಂದ ಮೇಲೆ ಎಷ್ಟು ಶ್ರೇಷ್ಠ ಭಾಗ್ಯ ಇದೆ! ಇಂತಹ ಭಾಗ್ಯ ಕಲ್ಪದಲ್ಲಿ ಯಾರಿಗೂ ಪ್ರಾಪ್ತಿಯಾಗಲು ಸಾಧ್ಯವಿಲ್ಲ. ಎಷ್ಟು ದೊಡ್ಡ ಭಾಗ್ಯ ಎಂದರೆ ಭಾಗ್ಯ ವಿಧಾತನನ್ನೇ ತಮ್ಮವರನ್ನಾಗಿ ಮಾಡಿಕೊಂಡಿರುವಿರಿ. ಒಂದೊಂದು ಭಾಗ್ಯವನ್ನು ಪ್ರತ್ಯೇಕವಾಗಿ ಕೇಳಬೇಕಾಗಿಲ್ಲ. ಭಾಗ್ಯ ವಿಧಾತಾನಿಂದ ಎಲ್ಲಾ ಭಾಗ್ಯವನ್ನು ವಾರಸತ್ವದ (ಆಸ್ತಿಯ) ರೂಪದಲ್ಲಿ ತೆಗೆದುಕೊಂಡಿರುವಿರಿ. ವಾರಸತ್ವವನ್ನು ಎಂದೂ ಬೇಡಬೇಕಾಗಿಲ್ಲ. ಸರ್ವ ಭಾಗ್ಯವನ್ನು ಭಾಗ್ಯ ವಿಧಾತಾ ಸ್ವಯಂ ಕೊಟ್ಟಿರುವುದು. **ತಪಸ್ಸು ಅಂದರೆ ಆತ್ಮ ಹೇಳುತ್ತದೆ ನಾನು ನಿನ್ನವನು ಮತ್ತು ನೀನು ನನ್ನವನು. ಇದಕ್ಕೆ ತಪಸ್ಸು ಎಂದು ಹೇಳಲಾಗುತ್ತದೆ. ಇದೇ ತಪಸ್ಸಿನ ಬಲದಿಂದ ಭಾಗ್ಯ ವಿಧಾತಾನನ್ನು ನಿಮ್ಮವರನ್ನಾಗಿ ಮಾಡಿಕೊಂಡಿರುವಿರಿ**. ಭಾಗ್ಯ ವಿಧಾತಾ ಸಹ ನಾನು ನಿಮ್ಮವನು ಎಂದು ಹೇಳುತ್ತಾರೆ. ಅಂದಮೇಲೆ ಎಂತಹ ಶ್ರೇಷ್ಠ ಭಾಗ್ಯವಾಯಿತು ಭಾಗ್ಯದ ಜೊತೆಗೆ ಸ್ವರಾಜ್ಯ ಈಗ ಸಿಕ್ಕಿದೆ. ಭವಿಷ್ಯ ವಿಶ್ವರಾಜ್ಯದ ಆಧಾರ ಸ್ವರಾಜ್ಯ ಆಗಿದೆ. ಆದ್ದರಿಂದ ತಪಸ್ವಿರಾಜ ಆಗಿರುವಿರಿ. ಬಾಪ್‌ದಾದಾರವರಿಗೆ ಸಹ ತಮ್ಮ ಪ್ರತಿಯೊಬ್ಬ ರಾಜ್ಯಾಧಿಕಾರಿ ಮಕ್ಕಳನ್ನು ನೋಡಿ ಹರ್ಷವಾಗುತ್ತಿದೆ. ಭಕ್ತಿಯಲ್ಲಿ ಅನೇಕ ಜನ್ಮದಲ್ಲಿ

ಬಾಪ್‌ದಾದಾ ಅವರ ಮುಂದೆ ಏನು ಹೇಳಿದಿರಿ? ನೆನಪಿದೆಯೇ ಅಥವಾ ಮರೆತುಹೋಗಿದೆಯೇ? ನಾನು ಗುಲಾಮ, ನಾನು ಗುಲಾಮ, ಎಂದೇ ಬಾರಿ ಬಾರಿಗೂ ಹೇಳಿದಿರಿ. ನಾನು ನಿನ್ನ ಗುಲಾಮ. ಬಾಬಾ ಹೇಳುತ್ತಾರೆ ನನ್ನ ಮಕ್ಕಳು ಗುಲಾಮರೇ! ಸರ್ವಶಕ್ತಿವಂತನ ಮಕ್ಕಳು ಗುಲಾಮರು ಎನ್ನುವುದು ಶೋಭಿಸುತ್ತದೆಯೇ! ಆದ್ದರಿಂದ ತಂದೆ ನಾನು ನಿನ್ನ ಗುಲಾಮ ಎನ್ನುವುದರ ಬದಲಾಗಿ ಯಾವ ಅನುಭವ ಮಾಡಿಸಿದರು? ನಾನು ನಿನ್ನವನು. ಗುಲಾಮರಿಂದ ರಾಜರಾದಿರಿ. ಈಗಲೂ ಎಂದಾದರೂ ಗುಲಾಮರಾಗುವುದಿಲ್ಲ ತಾನೇ? ಗುಲಾಮತನದ ಹಳೆಯ ಸಂಸ್ಕಾರ ಇಮರ್ಜ್ ಆಗುವುದಿಲ್ಲ ತಾನೇ? ಮಾಯೆಯ ಗುಲಾಮರಾಗುತ್ತೀರಾ? ರಾಜನೆಂದೂ ಗುಲಾಮನಾಗಲು ಸಾಧ್ಯವಿಲ್ಲ. ಗುಲಾಮಗಿರಿ ಬಿಟ್ಟು ಹೋಯಿತೊ ಅಥವಾ ಒಂದೊಂದು ಬಾರಿ ಇಷ್ಟ ಆಗುತ್ತದೆಯೋ? ತಪಸ್ಸಿನ ಬಲ ಬಹಳ ಶ್ರೇಷ್ಠವಾಗಿದೆ ಮತ್ತು ತಪಸ್ಸು ಏನು ಮಾಡುತ್ತೀರಿ? ತಪಸ್ಸಿನಲ್ಲಿ ಪರಿಶ್ರಮ ಪಡುತ್ತೀರಾ ? ಬಾಪ್‌ದಾದಾರವರು ತಪಸ್ಸು ಎಂದರೇನು ಎನ್ನುವುದನ್ನು ಹೇಳಿದ್ದರು. ಮೋಜು ಮಾಡುವುದು. ತಪಸ್ಸು ಎಂದರೆ ಬಹಳ ಸಹಜವಾಗಿ ಹಾಡುವುದು ಮತ್ತು ನೃತ್ಯ ಮಾಡುವುದು, ಅಷ್ಟೇ. ನೃತ್ಯ ಮಾಡುವುದು ಹಾಡುವುದು ಸಹಜವಾಗಿದೆಯೊ ಅಥವಾ ಕಷ್ಟವಾಗಿದೆಯೊ? ಮನೋರಂಜನೆ ಆಗಿದೆಯೊ ಅಥವಾ ಪರಿಶ್ರಮವಾಗಿದೆಯೋ? ಹಾಗಾದರೆ ತಪಸ್ಸಿನಲ್ಲಿ ಏನು ಮಾಡುತ್ತೀರಿ? ತಪಸ್ಸಿನ ಪ್ರತ್ಯಕ್ಷ ಫಲವಾಗಿದೆ ಖುಷಿ(ಸಂತೋಷ). ಖುಷಿ ಎಂದರೆ ಏನು? ನೃತ್ಯ ಮಾಡುವುದು. ತಪಸ್ಸು ಎಂದರೆ ಖುಷಿಯಲ್ಲಿ ನೃತ್ಯ ಮಾಡುವುದು ಮತ್ತು ತಂದೆಯ ಮತ್ತು ನಿಮ್ಮ ಆದಿ, ಅನಾದಿ ಗುಣಗಳ ಗಾಯನ ಮಾಡುವುದು. ಈ ಗೀತೆ ಎಷ್ಟು ದೊಡ್ಡದು ಮತ್ತು ಎಷ್ಟು ಸಹಜವಾಗಿದೆ. ಇದರಲ್ಲಿ ಕಂಠ ಸರಿ ಇದೆಯೊ ಇಲ್ಲವೊ ಎನ್ನುವ ಮಾತಿಲ್ಲ. ನಿರಂತರ ಈ ಗೀತೆಯನ್ನು ಹಾಡಲು ಸಾಧ್ಯವಿದೆ. ನಿರಂತರ ಖುಷಿಯಲ್ಲಿ ನೃತ್ಯ ಮಾಡುತ್ತಿರಿ. ಹಾಗಾದರೆ ತಪಸ್ಸಿನ ಅರ್ಥವೇನು? ನೃತ್ಯ ಮಾಡುವುದು ಮತ್ತು ಹಾಡುವುದು ಎಷ್ಟು ಸಹಜವಾಗಿದೆ. ಯಾರು ಸಣ್ಣ ತಪ್ಪು ಮಾಡುತ್ತಾರೆ ಅವರ ತಲೆ ಭಾರ ಆಗುತ್ತದೆ. ಬ್ರಾಹ್ಮಣ ಜೀವನದಲ್ಲೂ ಯಾರ ತಲೆಯೂ ಎಂದೂ ಬಾರವಾಗಲು ಸಾಧ್ಯವಿಲ್ಲ. ಆಸ್ಪತ್ರೆ ಕಟ್ಟುವವರ ತಲೆ ಭಾರವಾಯಿತೇ? ಟ್ರಸ್ಟೀ ಎದುರಿಗೆ ಕುಳಿತಿರುವರು! ತಲೆ ಭಾರವಾಯಿತೇ? ಮಾಡಿ ಮಾಡಿಸುವವರು ಬಾಬಾ ಆಗಿದ್ದಾರೆ ಎಂದ ಮೇಲೆ ನಿಮಗೆ ಯಾವ ಹೊರೆ ಇದೆ? ಇದಂತೂ ನಿಮಿತ್ತರಾಗಿ ಭಾಗ್ಯವನ್ನು ತಯಾರು ಮಾಡಿಕೊಳ್ಳುವ ಸಾಧನ ಮಾಡಿಕೊಳ್ಳುತ್ತಿರುವಿರಿ. ನಿಮ್ಮ ಜಾವಬ್ದಾರಿ ಏನಿದೆ? ತಂದೆಯ ಬದಲಾಗಿ ನಿಮ್ಮ ಜವಾಬ್ದಾರಿ ಎಂದು ತಿಳಿಯುತ್ತೀರಿ ಅದರಿಂದ ತಲೆ ಭಾರ ಆಗುತ್ತದೆ. ತಂದೆ ಸರ್ವಶಕ್ತಿವಂತ ನನ್ನ ಜೊತೆಗಾರ ಆಗಿರುವಾಗ ಯಾವ ಭಾರ ಇದೆ? ಚಿಕ್ಕ ತಪ್ಪು ಮಾಡುತ್ತೀರಿ. ನನ್ನ ಜವಾಬ್ದಾರಿ ಎಂದು ತಿಳಿಯುತ್ತೀರಿ ಅದರಿಂದ ತಲೆ ಭಾರ ಆಗುತ್ತದೆ. ಆದ್ದರಿಂದ ಬ್ರಾಹ್ಮಣ ಜೀವನವೇ ನೃತ್ಯ ಮಾಡುವುದು, ಹಾಡುವುದು ಮತ್ತು ಮೋಜು ಮಾಡುವುದಾಗಿದೆ. ವಾಚಾ ಸೇವೆಯೇ ಇರಲಿ ಕರ್ಮಣಾ ಸೇವೆಯೇ ಇರಲಿ. ಈ ಸೇವೆಯೂ ಒಂದು ಆಟ ಆಗಿದೆ. ಸೇವೆ ಅಂದರೆ ಇನ್ನೇನೂ ಅಲ್ಲ. ಕೆಲವು ಆಟಗಳು ಹಗುರ ಆಗಿರುತ್ತವೆ ಕೆಲವು ಬುದ್ಧಿಯ ಆಟ ಇರುತ್ತದೆ. ಆದರೆ ಅದೊಂದು ಆಟವೇ ತಾನೆ? ಬುದ್ಧಿಯ ಆಟದಲ್ಲಿ ಬುದ್ಧಿ ಭಾರ ಆಗುತ್ತದೆಯೇನು? ಇದೆಲ್ಲಾ ಆಟವಾಡುತ್ತೀರಿ. ಎಂತಹ ವಿಚಾರ ಮಾಡುವ ಕೆಲಸವೇ ಇರಲಿ, ಗಮನ ಕೊಡಬೇಕಾದ ಕೆಲಸ ಇರಲಿ ಮಾಸ್ಟರ್ ಸರ್ವಶಕ್ತಿವಾನ್ ಆತ್ಮ ಆದವರಿಗೆ ಎಲ್ಲವೂ ಆಟ ಆಗಿದೆ, ಹೌದಲ್ಲವೇ? ಅಥವಾ ಸ್ವಲ್ಪ ಸ್ವಲ್ಪ ಮಾಡುತ್ತಾ ಸುಸ್ತಾಗುತ್ತೀರಾ? ಹೆಚ್ಚಿನವರು ಅಥಕ್( ದಣಿವರಿಯದ) ಆಗಿರುತ್ತೀರಿ ಆದರೆ ಕೆಲವು ಬಾರಿ ಸುಸ್ತಾಗುತ್ತೀರಿ. ಇದೇ ಯೋಗದ ಪ್ರಯೋಗ. ಸರ್ವ ಖಜಾನೆಗಳು ಅದು ಸಂಕಲ್ಪವೇ ಇರಲಿ, ಜ್ಞಾನದ ಖಜಾನೆಯೇ ಇರಲಿ, ಅಥವಾ ಸ್ಥೂಲ ಧನವನ್ನು ಸಹ ಯೋಗದ ಪ್ರಯೋಗದ ರೀತಿಯಲ್ಲಿ ಪ್ರಯೋಗ ಮಾಡುತ್ತಿದ್ದರೆ ಪ್ರತಿ ಖಜಾನೆಯೂ ಹೆಚ್ಚುತ್ತಾ ಹೋಗುತ್ತದೆ. ಈ ತಪಸ್ಯಾ ವರ್ಷದಲ್ಲಿ ಯೋಗದ ಪ್ರಯೋಗ ಮಾಡಿರುವಿರಿ ಅಲ್ಲವೇ. ಏನು ಪ್ರಯೋಗ ಮಾಡಿರುವಿರಿ? ಈ ಒಂದೊಂದು ಖಜಾನೆಯ ಪ್ರಯೋಗ ಮಾಡಿರಿ. ಹೇಗೆ ಪ್ರಯೋಗ ಮಾಡುವುದು? ಯಾವುದೇ ಖಜಾನೆಯನ್ನು ಕಡಿಮೆ ಖರ್ಚಿನಲ್ಲಿ ಅಧಿಕ ಪ್ರಾಪ್ತಿ. ಪರಿಶ್ರಮ ಕಡಿಮೆ ಆದರೆ ಸಫಲತೆ ಹೆಚ್ಚು ಈ ವಿಧಿಯಿಂದ ಪ್ರಯೋಗ ಮಾಡಿರಿ. ಸಮಯ ಮತ್ತು ಸಂಕಲ್ಪ – ಇವೆರಡೂ ಶ್ರೇಷ್ಠ ಖಜಾನೆಗಳಾಗಿವೆ. ಆದ್ದರಿಂದ ಸಂಕಲ್ಪದ ಖರ್ಚು ಕಡಿಮೆ ಆಗಬೇಕು ಆದರೆ ಪ್ರಾಪ್ತಿ ಹೆಚ್ಚಾಗಬೇಕು. ಸಾಧಾರಣ ವ್ಯಕ್ತಿ ಮೂರು ನಾಲ್ಕು ನಿಮಿಷ ಸಂಕಲ್ಪ ಮಾಡಿ, ವಿಚಾರ ಮಾಡಿ ಸಫಲತೆ ಅಥವಾ ಪ್ರಾಪ್ತಿ ಮಾಡಿಕೊಳ್ಳಲು ಸಾಧ್ಯವಾದರೆ ನೀವು ಎರಡು ಸೆಕೆಂಡಿನಲ್ಲಿ ಮಾಡಲು ಸಾಧ್ಯವಿದೆ. ಇದನ್ನೇ ಸಾಕಾರದಲ್ಲಿ ಬ್ರಹ್ಮಾ

ತಂದೆ ಹೇಳುತ್ತಿದ್ದರು ಕಡಿಮೆ ಖರ್ಚಿನಲ್ಲಿ ಅಧಿಕ ಲಾಭ ಪಡೆಯುವುದು. ಕರ್ಚು ಕಡಿಮೆ ಮಾಡಿರಿ ಆದರೆ ಪ್ರಾಪ್ತಿ 100 ಪಟ್ಟು ಇರಬೇಕು. ಇದರಿಂದ ಏನಾಗುವುದು? ಏನೇನು ಉಳಿತಾಯ ಆಗುತ್ತದೆ. ಸಂಕಲ್ಪವೆ ಇರಲಿ, ಸಮಯವೇ ಇರಲಿ ಅದನ್ನು ಅನ್ಯರ ಸೇವೆಯಲ್ಲಿ ತೊಡಗಿಸಲು ಸಾಧ್ಯ ಆಗುವುದು. ದಾನ ಪುಣ್ಯ ಯಾರು ಮಾಡಲು ಸಾಧ್ಯ? ಧನದ ಉಳಿತಾಯ ಮಾಡುವವರು. ಕೇವಲ ನಿಮಗಾಗಿ ಸಂಪಾದನೆ ಮಾಡಿಕೊಂಡಿರಿ ಮತ್ತು ತಿಂದಿರಿ ಆಗ ದಾನ ಪುಣ್ಯ ಮಾಡಲು ಆಗುವುದಿಲ್ಲ. ಯೋಗದ ಪ್ರಯೋಗ ಇದೇ ಆಗಿದೆ. ಕಡಿಮೆ ಸಮಯದಲ್ಲಿ ಹೆಚ್ಚು ಪರಿಣಾಮ, ಕಡಿಮೆ ಸಂಕಲ್ಪದಿಂದ ಅನುಭೂತಿ ಹೆಚ್ಚು ಆಗಬೇಕು ಆಗ ಮಾತ್ರ ಪ್ರತಿ ಖಜಾನೆಯನ್ನು ಅನ್ಯರ ಪ್ರತಿ ಉಪಯೋಗ ಮಾಡಲು ಸಾಧ್ಯ ಆಗುತ್ತದೆ. ಅದೇ ರೀತಿ ವಾಣಿ ಮತ್ತು ಕರ್ಮ, ಖರ್ಚು ಕಡಿಮೆ ಮತ್ತು ಸಫಲತೆ ಹೆಚ್ಚು ಆಗ ಕಮಾಲ್ ಆಗುತ್ತದೆ.  ಬಾಪ್‌ದಾದಾ ಯಾವ ಅದ್ಭುತ ಮಾಡಿದರು? ಎಷ್ಟು ಕಡಿಮೆ ಸಮಯದಲ್ಲಿ ಏನೇನು ಮಾಡಿದರು? ಆದ್ದರಿಂದ ಕಮಾಲ್ ಮಾಡಿದಿರಿ ಎಂದು ಹೇಳುತ್ತೀರಿ. ಒಂದಕ್ಕೆ ಪದಮ ಪಟ್ಟು ಪ್ರಾಪ್ತಿಯ ಅನುಭವ ಮಾಡುತ್ತೀರಿ. ಅದಕ್ಕೆ ಹೇಳುತ್ತೀರಿ ಕಮಾಲ್ ಮಾಡಿಬಿಟ್ಟಿರಿ. ಬಾಪ್‌ದಾದಾ ಅವರ ಖಜಾನೆ ಪ್ರಾಪ್ತಿ ಮತ್ತು ಅನುಭೂತಿಯನ್ನು ಹೆಚ್ಚು ಮಾಡಿಸುತ್ತದೆ ಅದೇ ರೀತಿ ನೀವೂ ಸಹ ಯೋಗದ ಪ್ರಯೋಗ ಮಾಡಿರಿ. ಕೇವಲ ಹಾಡುವುದಲ್ಲ "ಬಾಬಾ ನೀವು ಕಮಾಲ್ ಮಾಡಿದಿರಿ" ನೀವೂ ಸಹ ಕಮಾಲ್ ಮಾಡುವವರಾಗಿರುವಿರಿ.  ಮಾಡುತ್ತೀರಿ ಕೂಡಾ. ಆದರೆ ತಪಸ್ಸು ನಡೆಯುತ್ತಿರುವ ಸಮಯದಲ್ಲಿಯೂ ಹೆಚ್ಚಿನವರ ಪರಿಣಾಮ ಏನಿತ್ತು?

ತಪಸ್ಸಿನ ಉಮಂಗ ಉತ್ಸಾಹ ಚೆನ್ನಾಗಿದೆ. **ಅಟೆನ್ಶನ್ ಸಹ ಇದೆ ಸಫಲತೆಯೂ ಇದೆ ಆದರೆ ಸ್ವಯಂ ಪ್ರತಿ ಸರ್ವ ಖಜಾನೆಗಳನ್ನು ಹೆಚ್ಚು ಉಪಯೋಗ ಮಾಡುತ್ತೀರಿ. ನೀವು ಅನುಭೂತಿ ಮಾಡುವುದು ಒಳ್ಳೆಯದೇ. ಆದರೆ ತಪಸ್ಯಾ ವರ್ಷ ಸ್ವಯಂ ಪ್ರತಿ ಮತ್ತು ವಿಶ್ವ ಸೇವೆಯ ಪ್ರತಿಯೇ ಕೊಡಲಾಗಿದೆ. ತಪಸ್ಸಿನ ಪ್ರಕಂಪನಗಳನ್ನು ವಿಶ್ವದಲ್ಲಿ ಇನ್ನೂ ತೀವ್ರ ಗತಿಯಲ್ಲಿ ಹರಡಿಸಿರಿ.** ಯೋಗದ ಪ್ರಯೋಗ ಮತ್ತು ಅನುಭವದ ಪ್ರಯೋಗ ಶಾಲೆಯಲ್ಲಿ ಪ್ರಯೋಗದ ಬಗ್ಗೆ ಏನು ಹೇಳಲಾಗಿದೆ ಅದರ ಗತಿಯನ್ನು ಹೆಚ್ಚಿಸಿರಿ. ವರ್ತಮಾನ ಸಮಯದಲ್ಲಿ ಸರ್ವ ಆತ್ಮರಿಗೆ ನಿಮ್ಮ ಶಕ್ತಿಶಾಲಿ ಪ್ರಕಂಪನಗಳ ಮೂಲಕ ವಾಯುಮಂಡಲದ ಮೂಲಕ ಆಗುವ ಪರಿವರ್ತನೆಯ ಅವಶ್ಯಕತೆ ಇದೆ. ಆದ್ದರಿಂದಲೇ ಪ್ರಯೋಗವನ್ನು ಇನ್ನೂ ಹೆಚ್ಚಿಸಿರಿ. ಸಹಯೋಗಿ ಮಕ್ಕಳು ಬಹಳ ಇದ್ದಾರೆ. ಈ ಸಹಯೋಗವೇ ಯೋಗದಲ್ಲಿ ಬದಲಾವಣೆ ಆಗುತ್ತದೆ. ಒಂದಾಗಿದೆ ಸ್ನೇಹಿ ಸಹಯೋಗಿ ಮತ್ತು ಇನ್ನೊಂದು ಸಹಯೋಗಿ ಯೋಗಿ. ಮತ್ತು ಮೂರನೇಯವರು ನಿರಂತರ ಯೋಗಿ ಪ್ರಯೋಗಿ. ಈಗ ನಿಮ್ಮನ್ನು ನೀವು ಕೇಳಿಕೊಳ್ಳಿ ನಾನು ಯಾರು? ಆದರೆ ಬಾಪ್‌ದಾದಾ ಅವರಿಗೆ ಮೂರು ಪ್ರಕಾರದ ಮಕ್ಕಳು ಪ್ರಿಯರಾಗಿರುವರು. ಕೆಲವು ಮಕ್ಕಳ ವೈಬ್ರೇಶನ್ ತಂದೆಯವರೆಗೆ ತಲುಪುತ್ತದೆ. ಭಿನ್ನ ಭಿನ್ನ ಪ್ರಕಾರದ ವೈಬ್ರೇಶನ್ ಇವೆ. ತಂದೆಯ ಬಳಿ ಯಾವ ಮಾತು ಬಂದಿದೆ ಗೊತ್ತಿದೆಯೇ? ಸನ್ನೆಯಿಂದ ತಿಳಿದುಕೊಳ್ಳುವವರಾಗಿರುವಿರಿ ಅಲ್ಲವೇ? ಈ ತಪಸ್ಯಾ ವರ್ಷದಲ್ಲಿ ಏನೆಲ್ಲಾ ಆಗುತ್ತಿದೆ ಅದಕ್ಕೆ ಕಾರಣ ಏನು? ದೊಡ್ಡ ದೊಡ್ಡ ಕಾರ್ಯಕ್ರಮ ಹಾಕಿಕೊಂಡಿರುವಿರಿ ಅದಕ್ಕೆ ಕಾರಣ ಏನು? ಕೆಲವರು ಹೇಳುತ್ತಾರೆ ಇದೆ ತಪಸ್ಸಿನ ಫಲ ಆಗಿದೆ. ಕೆಲವರು ಹೇಳುತ್ತಾರೆ ತಪಸ್ಸಿನ ವರ್ಷದಲ್ಲಿ ಇದು ಏಕೆ? ಎರಡೂ ವೈಬ್ರೇಶನ್ ಬರುತ್ತವೆ. ಆದರೆ ಸಮಯದ ತೀವ್ರ ಗತಿ ಮತ್ತು ತಪಸ್ಸಿನ ಪ್ರಕಂಪನಗಳಿಂದ ಆವಶ್ಯಕತೆಯು ಪೂರ್ಣ ಆಗುವುದು ಇದು ತಪಸ್ಸಿನ ಬಲದ ಫಲ ಆಗಿದೆ. ಫಲ ಅಂತೂ ತಿನ್ನಬೇಕಲ್ಲವೇ. ತಪಸ್ಸು ಸರ್ವ ಅವಶ್ಯಕತೆಯನ್ನು ಪೂರ್ಣಗೊಳಿಸುತ್ತದೆ ಎನ್ನುವುದನ್ನು ಈ ಡ್ರಾಮಾ ತೋರಿಸಿಕೊಡುತ್ತದೆ. ತಿಳಿಯಿತೇ. ಇದು ಏಕೆ ನಡೆಯುತ್ತಿದೆ ಎನ್ನುವ ಪ್ರಶ್ನೆ ಇಲ್ಲ. ತಪಸ್ಸು ಅಂದರೆ ಸಫಲತೆ ಸಹಜ ಅನುಭೂತಿ ಆಗಬೇಕು. ಅಸಂಭವವು ಹೇಗೆ ಸಂಭವ ಆಗುತ್ತದೆ ಎನ್ನುವುದರ ಅನುಭವ ಹೆಚ್ಚು ಹೆಚ್ಚು ಮಾಡುವಿರಿ. ವಿಘ್ನಗಳು ಬರುವುದೂ ಸಹ ಡ್ರಾಮಾದಲ್ಲಿ ಆದಿಯಿಂದ ಅಂತ್ಯದವರೆಗೆ ನಿಗದಿಯಾಗಿದೆ. ಈ ವಿಘ್ನಗಳೂ ಸಹ ಅಸಂಭವವನ್ನು ಸಂಭವ ಮಾಡಿಸುತ್ತದೆ. ಮತ್ತು ನೀವೆಲ್ಲರೂ ಅನುಭವಿಗಳಂತೂ ಆಗಿಯೇ ಇರುವಿರಿ. ಆದ್ದರಿಂದ ವಿಘ್ನವು ಆಟ ಅನಿಸುತ್ತದೆ. ಫುಟ್ ಬಾಲ್ ಆಡುತ್ತೀರಿ. ಆಗ ಏನು ಮಾಡುತ್ತೀರಿ? ಚೆಂಡು ಬರುತ್ತದೆ ಆಗ ಒದೆಯುತ್ತೀರಿ ಅಲ್ಲವೇ? ಚೆಂಡು ಬರದೇ ಇದ್ದರೆ ಹೇಗೆ ಒದೆಯಲು ಸಾಧ್ಯ? ಆಟ ಹೇಗೆ ಆಗುವುದು? ಇದೂ ಸಹ ಫುಟ್ ಬಾಲ್ ಆಟ ಆಗಿದೆ. ಆಟ ಆಡುವುದರಲ್ಲಿ ಆನಂದ ಎನಿಸುತ್ತದೆ ಅಲ್ಲವೇ? ಅಥವಾ ಗೊಂದಲದಲ್ಲಿ ಬರುತ್ತೀರೊ? ಚೆಂಡು ನನ್ನ ಕಾಲ ಹತ್ತಿರ ಬರಬೇಕು ನಾನು ಒದೆಯಬೇಕು ಎಂದು ಪ್ರಯತ್ನ ಮಾಡುತ್ತೀರಿ ಅಲ್ಲವೆ. ಈ ಆಟ ಅಂತೂ

ನಡೆಯುತ್ತಿರುತ್ತದೆ. ಯಾವುದೂ ಹೊಸತಲ್ಲ. ಡ್ರಾಮಾ ಆಟವನ್ನೂ ತೋರಿಸುತ್ತದೆ ಮತ್ತು ಸಂಪನ್ನ ಸಫಲತೆಯನ್ನೂ ತೋರಿಸುತ್ತದೆ. ಇದೇ ಬ್ರಾಹ್ಮಣ - ಕುಲದ ರೀತಿ ಪದ್ಧತಿ ಆಗಿದೆ. ಒಳ್ಳೆಯದು.

ಈ ಗುಂಪಿಗೆ ಬಹಳ ಚಾನ್ಸ್ ಸಿಕ್ಕಿದೆ. ಯಾವುದೆ ಕಾರ್ಯದಲ್ಲಿ ನಿಮಿತ್ತ ಆಗುವುದು, ಯಾವುದೇ ಪ್ರಕಾರದ ವಿಧಿಯಿಂದ ನಿಮಿತ್ತ ಆಗುವುದು ಅರ್ಥಾತ್ ಚಾನ್ಸ್ ತೆಗೆದುಕೊಳ್ಳುವಂತಹ ಚಾನ್ಸೆಲ್ಲರ್ ಆಗುವುದು. ಇಂದಿನ ವಿಶ್ವದಲ್ಲಿ ಸಂಪತ್ತುಳ್ಳವರು ಬಹಳ ಇದ್ದಾರೆ ಆದರೆ ಜಗತ್ತಿನವರ ಬಳಿ ಇಲ್ಲದೇ ಇರುವ ಎಲ್ಲದಕ್ಕಿಂತ ದೊಡ್ಡ ಸಂಪತ್ತು ನಿಮ್ಮ ಬಳಿ ಯಾವುದಿದೆ? ಮತ್ತು ಅದರದೇ ಅವಶ್ಯಕತೆ ಸಂಪತ್ತುಳ್ಳವರಿಗೂ ಇದೆ ಮತ್ತು ಬಡವರಿಗೂ ಇದೆ. ಅದು ಯಾವ ಸಂಪತ್ತು? ಎಲ್ಲದಕ್ಕಿಂತ ಅವಶ್ಯಕ ಇರುವ ದೊಡ್ಡ ಸಂಪತ್ತಾಗಿದೆ ಸಹಾನುಭೂತಿ. ಬಡವರೇ ಇರಲಿ ಅಥವಾ ಧನವಂತರೇ ಇರಲಿ ಆದರೆ ಸಹಾನುಭೂತಿ ಇಲ್ಲ. ಸಹಾನುಭೂತಿಯ ಸಂಪತ್ತು ಎಲ್ಲದಕ್ಕಿಂತ ದೊಡ್ಡದು. ಇನ್ನೇನೂ ಕೊಡದಿದ್ದರೂ ಸಹಾನುಭೂತಿಯಿಂದ ಎಲ್ಲರನ್ನೂ ಸಂತುಷ್ಟ ಮಾಡಲು ಸಾಧ್ಯ ಇದೆ. ಮತ್ತು ನಿಮ್ಮ ಸಹಾನುಭೂತಿ ಈಶ್ವರೀಯ ಪರಿವಾರದ ಸಂಬಂಧದಿಂದ ಸಹಾನುಭೂತಿ ಇದೆ. ಅಲ್ಪ ಕಾಲದ ಸಹಾನುಭೂತಿ ಅಲ್ಲ. ಪರಿವಾರದ ಸಹಾನುಭೂತಿ ಎಲ್ಲದಕ್ಕಿಂತ ದೊಡ್ಡ ಸಹಾನುಭೂತಿ ಆಗಿದೆ ಮತ್ತು ಎಲ್ಲರಿಗೂ ಅವಶ್ಯಕ ಆಗಿದೆ. ಮತ್ತು ನೀವು ಎಲ್ಲರಿಗೂ ಕೊಡಲು ಸಾಧ್ಯ ಇದೆ. ಆತ್ಮಿಕ ಸಹಾನುಭೂತಿ ತನು, ಮನ ಮತ್ತು ಧನದ ಪೂರೈಕೆಯನ್ನೂ ಮಾಡಲು ಸಾಧ್ಯ ಇದೆ. ಒಳ್ಳೆಯದು ಇದರ ಬಗ್ಗೆ ನಂತರ ತಿಳಿಸುತ್ತೇವೆ.

**ನಾಲ್ಕೂ ಕಡೆಯ ತಪಸ್ವೀ ರಾಜ ಶ್ರೇಷ್ಠ ಆತ್ಮರಿಗೆ, ಸದಾ ಯೋಗದ ಪ್ರಯೋಗದ ಮೂಲಕ ಖರ್ಚು ಕಡಿಮೆ ಶ್ರೇಷ್ಠ ಸಫಲತೆ ಅನುಭವ ಮಾಡುವಂತಹ, ಸದಾ ನಾನು ನಿನ್ನವನು ನೀನು ನನ್ನವನು ಈ ತಪಸ್ಸಿನಲ್ಲಿ ಮಗ್ನ ಆಗಿರುವಂತಹ, ಸದಾ ಪ್ರತಿ ಸಮಯ ತಪಸ್ಸಿನ ಮೂಲಕ ಖುಷಿಯಲ್ಲಿ ನೃತ್ಯ ಮಾಡುವ ಮತ್ತು ತಂದೆಯ ಮತ್ತು ತಮ್ಮ ಗುಣ ಗಾಯನ ಮಾಡುವಂತಹ. ಇಂತಹ ದೇಶ ವಿದೇಶದ ಸರ್ವ ಸ್ಮೃತಿ ಸ್ವರೂಪ ಮಕ್ಕಳಿಗೆ ಬಾಪ್‌ದಾದಾರವರ ನೆನಪು ಪ್ರೀತಿ ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 26-10-1991.

***ತಪಸ್ಸಿನ ಪ್ರತ್ಯಕ್ಷ ಫಲ- ಖುಷಿ.***

ಆತ್ಮ "ನಾನು ನಿನ್ನವನು ಮತ್ತು ನೀನು ನನ್ನವನು" ಎಂದು ಹೇಳುವುದನ್ನು ತಪಸ್ಸು ಎಂದು ಹೇಳಲಾಗುತ್ತದೆ. ತಪಸ್ಸು ಎಂದರೆ ಬಹಳ ಸಹಜವಾಗಿ ಹಾಡುವುದು ಮತ್ತು ನೃತ್ಯ ಮಾಡುವುದು ಅಷ್ಟೇ. ನೃತ್ಯ ಮಾಡುವುದು, ಹಾಡುವುದು ಸಹಜವಾಗಿದೆಯೋ ಅಥವಾ ಕಷ್ಟವಾಗಿದೆಯೋ? ಮನೋರಂಜನೆಯಾಗಿದೆಯೋ ಅಥವಾ ಪರಿಶ್ರಮವಾಗಿದೆಯೋ? ಹಾಗಾದರೆ ತಪಸ್ಸಿನಲ್ಲಿ ಏನು ಮಾಡುತ್ತೀರಿ ತಪಸ್ಸಿನ ಪ್ರತ್ಯಕ್ಷ ಫಲವಾಗಿದೆ ಖುಷಿ. ತಪಸ್ಸು ಎಂದರೇನು? ನೃತ್ಯ ಮಾಡುವುದು. ತಪಸ್ಸು ಎಂದರೆ ಖುಷಿಯಲ್ಲಿ ನೃತ್ಯ ಮಾಡುವುದು ಮತ್ತು ತಂದೆಯ ಮತ್ತು ನಿಮ್ಮ ಆದಿ, ಅನಾದಿ ಗುಣಗಳ ಗಾಯನ ಮಾಡುವುದು. ಈ ಗೀತೆ ಎಷ್ಟು ದೊಡ್ಡದು ಮತ್ತು ಎಷ್ಟು ಸಹಜವಾಗಿದೆ. ಇದರಲ್ಲಿ ಕಂಠ ಸರಿ ಇಲ್ಲದಿದ್ದರೂ ನಿರಂತರ ಹಾಡಬಹುದು. ನಿರಂತರ ಖುಷಿಯಲ್ಲಿ ನೃತ್ಯ ಮಾಡುತ್ತೀರಿ ಹಾಗಾದರೆ ತಪಸ್ಸಿನ ಅರ್ಥವೇನು ನೃತ್ಯ ಮಾಡುವುದು ಮತ್ತು ಹಾಡುವುದು, ಎಷ್ಟು ಸಹಜವಾಗಿದೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಪಸ್ಸಿನಿಂದ ರಾಜ್ಯ ಭಾಗ್ಯವನ್ನು ಪಡೆದಿರುವ ತಪಸ್ವಿರಾಜನು.

2. ನಾನು ಭಾಗ್ಯವಿಧಾತನನ್ನು ನನ್ನವರನ್ನಾಗಿ ಮಾಡಿಕೊಂಡು ಸರ್ವಭಾಗ್ಯಗಳನ್ನು ವಾರಸತ್ವದ ರೂಪದಲ್ಲಿ ಪಡೆದಿರುವ ಶ್ರೇಷ್ಠಭಾಗ್ಯವಂತನು.

3. "ನಾನು ನಿನ್ನವನು ನೀನು ನನ್ನವನು" ಎಂಬ ಈ ತಪಸ್ಸಿನ ಬಲದಿಂದ ಭಾಗ್ಯವಿಧಾತನನ್ನು ನನ್ನವನನ್ನಾಗಿ ಮಾಡಿಕೊಂಡಿದ್ದೇನೆ.

4. ನಾನು ಸ್ವರಾಜ್ಯದ ಆಧಾರದಿಂದ ಭವಿಷ್ಯ ರಾಜ್ಯವನ್ನು ಪಡೆದಿದ್ದೇನೆ.

5. ನಾನು ಮಜಾದಿಂದ ಇರುತ್ತಾ, ಸಂತೋಷದಲ್ಲಿ ಸಹಜವಾಗಿ ನಾಟ್ಯವನ್ನು ಮಾಡುತ್ತಾ ತಂದೆಯ ಮತ್ತು ಸ್ವಯಂನ ಆದಿ, ಅನಾದಿ ಸ್ವರೂಪದ ಗುಣಗಳನ್ನು ಹಾಡುತ್ತಿರುವ ತಪಸ್ವಿ ಮೂರ್ತಿ.

6. ನಾನು ಸರ್ವಶಕ್ತಿವಂತನಾದ ಬಾಬಾ ನನ್ನ ಜೊತೆ ಇದ್ದಾರೆ ಎಂಬ ಭಾವನೆಯಿಂದ ಪ್ರತಿಯೊಂದು ಸೇವಾ ಕರ್ತವ್ಯದಲ್ಲಿ ಹಗುರತೆಯನ್ನು ಅನುಭವ ಮಾಡಿಕೊಂಡಿದ್ದೇನೆ.

7. ನಾನು ವಾಚಸೇವೆಯಾಗಲಿ, ಕರ್ಮಣಾ ಸೇವೆಯಾಗಲಿ, ಬುದ್ಧಿಯಿಂದ ಮಾಡುವ ಸೇವೆಯಾಗಲಿ, ಒಂದು ಆಟದಂತೆ ನೋಡುವ ಮಾಸ್ಟರ್ ಸರ್ವ ಶಕ್ತಿವಂತನು.

8. ನಾನು ಸರ್ವಖಜಾನೆಗಳನ್ನು ಕಡಿಮೆ ಖರ್ಚು ಹೆಚ್ಚು ಫಲಿತಾಂಶ ಮತ್ತು ಪ್ರಾಪ್ತಿ ಬರುವ ರೀತಿಲ್ಲಿ ಉಪಯೋಗಿಸಿ ಉಳಿತಾಯ ಮಾಡಿ ಜಮಾ ಖಾತೆಯನ್ನು ಇತರರ ಸೇವೆಯಲ್ಲಿ ಉಪಯೋಗಿಸುವ ಪುಣ್ಯಾತ್ಮ.

9. ನಾನು ಕಡಿಮೆ ಖರ್ಚು ಹೆಚ್ಚು ಫಲಿತಾಂಶ ಎಂಬ ವಿಧಿಯಿಂದ ಒಂದಕ್ಕೆ ಪದಮದಷ್ಟು ಪ್ರಾಪ್ತಿಯನ್ನು ಅನುಭವ ಮಾಡಿಕೊಂಡು ತಂದೆಯ ಸಮಾನವಾಗಿ ಅದ್ಭುತವನ್ನು ಮಾಡಿ ತೋರಿಸಿದ್ದೇನೆ.

10. ನನ್ನ ಸರ್ವ ಖಾನೆಗಳನ್ನು ಸ್ವಯಂನೊಂದಿಗೆ ವಿಶ್ವಕ್ಕಾಗಿ ಉಪಯೋಗಿಸಿದ್ದೇನೆ.

11. ನಾನು ತಪಸ್ಸಿನ ಪ್ರಕಂಪಗಳನ್ನು ವಿಶ್ವದಲ್ಲಿ ಮತ್ತಷ್ಟು ತೀವ್ರ ವೇಗದಿಂದ ವ್ಯಾಪಿಸಿ ಯೋಗದ ಪ್ರಯೋಗವನ್ನು ಮಾಡಿರುವ ನಿರಂತರ ಯೋಗಿ, ಪ್ರಯೋಗಿ.

12. ನನ್ನ ಶಕ್ತಿಶಾಲಿ ತರಂಗಗಳಿಂದ ವಾಯುಮಂಡಲ ಪರಿವರ್ತನೆಯಾಯಿತು.

13. ನಾನು ಯಾವ ಕಾರ್ಯಕ್ಕಾದರೂ ಯಾವುದೋ ಒಂದು ವಿಧಿಯಿಂದ ನಿಮಿತ್ತವಾಗಿ ಅವಕಾಶವನ್ನು ಪಡೆಯುವ ಅವಕಾಶಧಾರಿ.

14. ನಾನು ಧನವಂತರಿಗೆ, ಬಡವರಿಗೆ ಎಲ್ಲರಿಗೂ ಅವಸರವಿರುವ ಸಂಪತ್ತಾದ ಆತ್ಮಿಕ ಸಹಾನುಭೂತಿಯ ಅಧಿಕಾರಿ.